# ಬುಡಕಟ್ಟು ಹಾಗು ಸೌಲಭ್ಯವಂಚಿತ ಗುಂಪುಗಳನ್ನು ಒಳಗೊಂಡ ಯೋಜನೆಗಳು (ಸಾಮಾಜಿಕ ತುಲನೆಯನ್ನು ಒಳಗೊಂಡಿದೆ)

## ಕಾರ್ಯನಿರ್ವಹಣೆಯ ಸಾರಾಂಶ

ವರದಿಯನ್ನು ಸಿದ್ದಪಡಿಸಿದ್ದು

**ವಿಕೇಂದ್ರೀಕರಣ ವಿಶ್ಲೇಷಣಾ ಕೋಶ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಕರ್ನಾಟಕ ಸರ್ಕಾರ**

# ಕಾರ್ಯನಿರ್ವಹಣೆಯ ಸಾರಾಂಶ

**ಪ್ರಸಂಗ:**

ವಿಶ್ವ ಬ್ಯಾಂಕಿನ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕರ್ನಾಟಕ ಪಂಚಾಯತ್‌ನ ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೇವೆಗಳನ್ನು ಸುಧಾರಿಸುವ ಉದ್ದೇಶದಿಂದ ಸ್ಥಳೀಯ ಜನರ ಆದ್ಯತೆಯನ್ನು ಬಲಪಡಿಸುವಿಕೆ ಮತ್ತು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ ನಿರ್ಧರಿಸಲು ವಿಶ್ವಬ್ಯಾಂಕ್ ಅನುದಾನಿತವು ಕರ್ನಾಟಕ ಪಂಚಾಯತ್ ಸಬಲೀಕರಣ – ಗ್ರಾಮ ಸ್ವರಾಜ್ ಯೋಜನೆ (2006–2014) 39 “ಅತ್ಯಂತ ಹಿಂದುಳಿದ” ತಾಲ್ಲುಕುಗಳಲ್ಲಿನ 1341 ಗ್ರಾಮ ಪಂಚಾಯಿತಿಗಳು ಗುರಿಯಾಗಿತ್ತು.




ಪ್ರಸ್ತಾಪಿತ ಯೋಜನೆಯು (2015–2020) ವಿಸ್ತೃತವಾದ ಭೌಗೋಳಿಕ ವ್ಯಾಪ್ತಿ ಮತ್ತು ಬಲವಾದ ಪ್ರೋತ್ಸಾಹಕ ಪ್ರಚೋದಕವಾಗಿದೆ ಹಾಗು ಅದರ ಹಿಂದಿನ ವಿಶಾಲ ರೂಪರೇಖೆ ಅನುಸರಿಸುತ್ತದೆ. ಕರ್ನಾಟಕ ಸರ್ಕಾರವು ಮುಕ್ತ ಅನುದಾನವು ಯೋಜನೆಯಲ್ಲಿ ಒಳಗೊಂಡಂತೆ “ಹೆಚ್ಚು ಹಿಂದುಳಿದ” ತಾಲ್ಲೂಕುಗಳಲ್ಲಿ (1244 ಗ್ರಾಮ ಪಂಚಾಯಿತಿಗಳು) ಜೊತೆಗೆ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಒಳಗೊಂಡಂತೆ ಎರಡನೇ ಹಂತದ ಯೋಜನೆಯನ್ನು ವಿಸ್ತರಿಸಲು ಪ್ರಸ್ತಾಪಿಸಿದರು. ಹೀಗಾಗಿ ಒಟ್ಟು ಸಂಖ್ಯೆ 1341 ರಿಂದ 2786 ಗ್ರಾಮ ಪಂಚಾಯಿತಿಗಳಿಗೆ ಸಮರ್ಥವಾಗಿ ಭಾಗವಹಿಸುವದನ್ನು ಹೆಚ್ಚಿಸಲಾಗಿದೆ.

ಈ ತಾಲ್ಲೂಕುಗಳಲ್ಲಿ ಹಲವಾರು ವಿಶಿಷ್ಟ ಜೀವನ ಶೈಲಿ, ಭಾಷೆ ಮತ್ತು ಸಂಸ್ಕೃತಿ ಹೊಂದಿರುವ ಸ್ಥಳೀಯ ಸಮುದಾಯಗಳು ವಾಸಿಸುತ್ತಿದ್ದಾರೆ ಜೊತೆಗೆ ದೂರದ ಪ್ರದೇಶಗಳಲ್ಲಿ ನೆಲೆಸಿದ್ದು ಅವರು

ಇದುವರಿಗಿನ ಪ್ರಗತಿ ಕಾಮಗಾರಿ ಚಟುವಟಿಕೆಗಳಿಂದ ತೆಗೆದುಹಾಕಲಾಗಿದೆ ಮತ್ತು ಇದು ಅತ್ಯಂತ ಸಾಮಾನ್ಯ ಜನಸಂಖ್ಯೆಗಿಂತ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳನ್ನು ಅನುಭವಿಸಿರುವುದಿಲ್ಲ.

ಸ್ಥಳೀಯ ಜನರ ಯೋಜನೆಯ ಉದ್ದೇಶವೇ ಯೋಜನೆಯ ಪ್ರದೇಶಗಳಲ್ಲಿನ ವಿಶಿಷ್ಟ ಅಗತ್ಯಗಳನ್ನು ಮತ್ತು ಸ್ಥಳೀಯ ಸಮುದಾಯಗಳ (ಪರಿಶಿಷ್ಠ ಪಂಗಡಗಳು ಮತ್ತು ಆದಿವಾಸಿಗಳು) ಆಕಾಂಕ್ಷೆಗಳನ್ನು ಯೋಜನೆಯ ಪ್ರಮುಖ ಫಲಾನುಭವಿಗಳಾಗುವಂತೆ ಒದಗಿಸುವುದು (ಅದುದರಿಂದ ಕರ್ನಾಟಕ ರಾಜ್ಯ ಸರ್ಕಾರವು ಪರಿಗಣಿಸಿದ ಪರಿಶಿಷ್ಠ ಪಂಗಡ, ಆದಿವಾಸಿಗಳು, ಮಹಿಳೆಯರು ಮತ್ತು ವಿಶೇಷ ಅಗತ್ಯದಿಂದ ಹೊರತುಪಡಿಸಿದ ಗುಂಪುಗಳನ್ನು ಹಿಡಿದು ಅದನ್ನೇ ಈ ದಾಖಲೆಗಳಲ್ಲಿ ಪ್ರತಿಬಿಂಬಿತವಾಗುವಂತೆ ಮಾಡಲಾಗಿದೆ).

**<u>ಪರಿಶಿಷ್ಠ ಪಂಗಡ ಮತ್ತು ವಿಶೇಷವಾಗಿ ಆದಿವಾಸಿಗಳು ಕರ್ನಾಟಕದಲ್ಲಿ ಗುರಿಯಾಗುತ್ತಾರೆ.</u>**

ಕರ್ನಾಟಕದಲ್ಲಿ ಒಟ್ಟು ಪರಿಶಿಷ್ಠ ಜಾತಿ ಜನಸಂಖ್ಯೆಯು 17.15 ಮತ್ತು ಪರಿಶಿಷ್ಠ ಪಂಗಡಗಳು 6.95 ರಷ್ಟು ಶೇಕಡ ಒಟ್ಟು ಜನಸಂಖ್ಯೆಗೆ ರೂಪಿಸುತ್ತದೆ. ಪರಿಶಿಷ್ಠ ಜಾತಿ ಜನಸಂಖ್ಯೆ 2001 ರಲ್ಲಿ 85,63,930 ರಿಂದ 1,0474,992 ರಷ್ಟು ಹೆಚ್ಚಳವಾಗಿದೆ, ರಾಜ್ಯದಲ್ಲಿ ಪರಿಶಿಷ್ಠ ಜಾತಿ ಜನಸಂಖ್ಯೆಯ ನೋಂದಣಿ ಒಂದು ದಶಕದ ಬೆಳವಣಿಗೆ ದರ ಶೇ 22.32 ಹಾಗೆಯೇ ಪರಿಶಿಷ್ಠ ಪಂಗಡಗಳ ಜನಸಂಖ್ಯೆ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.17.15 ರೂಪಿಸುತ್ತದೆ.

ಸಂವಿಧಾನದ ನಿಯಮ (ತಿದ್ದುಪಡಿ) ಕಾಯಿದೆ 2003 ಪ್ರಕಾರ 50 ಪರಿಶಿಷ್ಠ ಪಂಗಡದ ಸಮುದಾಯಗಳು ಕರ್ನಾಟಕದಲ್ಲಿ ಇವೆ. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಪಂಚಾಯತ್ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ಮೀಸಲಾತಿ ನೀಡಲಾಗಿದೆ. ಪ್ರಸತ್ತು ಗ್ರಾಮ ಪಂಚಾಯಿತಿಗಳ ಸದ್ಯಸರು ಪ್ರಮಾಣವು ಶೇ. 18, ಶೇ 11, ಶೇ 44 ಮತ್ತು ಶೇ 33 ಕ್ರಮವಾಗಿ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಸೇರಿದಂತೆ ಆಗಿದೆ. ತಾಲ್ಲೂಕು ಪಂಚಾಯಿತಿಗಳ ಸಂಖ್ಯೆಯು 176 ಸಹ ಸಂಸ್ಥೆಗಳಿಗೂ ಚುನಾಯಿತರಾಗುತ್ತಾರೆ. ಪಂಚಾಯತ್ ರಾಜ್ ಸಂಸ್ಥೆಯ ಒಂದು ತುದಿಯಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ 30 ಪಂಚಾಯಿತಿಗಳು ಇವೆ. ತಾಲ್ಲೂಕು ಪಂಚಾಯತ್ ಮಾರ್ಗದರ್ಶನದ ಹೊಣೆ ನೋಡಿದಾಗ, ಮೇಲ್ವಿಚಾರಣೆ, ಗ್ರಾಮ ಪಂಚಾಯತ್

ಚಟುವಟಿಕೆಗಳನ್ನು ಸಂಘಟಿಸಲು ಮತ್ತು ಪಂಚಾಯಿತಿಗಳ ಲೆಕ್ಕ ಪರಿಶೋಧನೆಯಂತಹ ಕಡೆಗೂ ತಾಲ್ಲೂಕ ಪಂಚಾಯಿತಿಗಳ ಜವಾಬ್ಧಾರಿಗಳು ತಮ್ಮ ಖಾತೆಗಳಲಿ ಇವೆ.

ಕರ್ನಾಟಕ ಸರ್ಕಾರ ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ, ಆದಾಗ್ಯೂ ಕ್ರಮ ಮಟ್ಟದಿಂದ ಕಾರ್ಯಗೊಳಿಸುವಲ್ಲಿ ಇದು ಅತ್ಯಂತ ಹೆಚ್ಚು ಅಗತ್ಯವಾಗಿದೆ ಎಂದು ಗಮನಿಸಲಾಗಿದೆ. ಆದ್ದರಿಂದ ಒಂದು ತ್ವರಿತ ಸಾಹಿತ್ಯ ವಿಮರ್ಶೆ ಮಾಡಲು ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಹುಟ್ಟುಹಾಕಿರುವ ಈ ಅಧ್ಯಾಯನವು ಮೂರು ವಿವಿಧ ಜಿಲ್ಲೆಗಳಿಂದ ಮೂರು ತಾಲ್ಲೂಕುಗಳನ್ನು ಒಳಗೊಂಡಂತೆ 12 ಗ್ರಾಮ ಪಂಚಾಯಿತಿಗಳಲ್ಲಿ ಕ್ಷೇತ್ರ ಅಧ್ಯಾಯನವನ್ನು ಜಾರಿಗೊಳಿಸಿಲಾಯಿತು ಯೋಜನೆಯ ಪ್ರದೇಶದಲ್ಲಿ ಪ್ರಸ್ತುತ ಪರಿಸ್ಥಿತಿ ಮತ್ತು ನೀತಿಗಳನ್ನು ಕರ್ನಾಟಕ ಸರ್ಕಾರದ ಪರಿಣಾಮಕಾರಿ ಯೋಜನೆಗೆ ಸಂಬಂಧಿಸಿದ ಮಧ್ಯಸ್ಥಿಕೆಗಳ ಬಗ್ಗೆ ಅರ್ಥೈಸಿಕೊಳ್ಳಲು ಕೆಲಸವನ್ನು ಜಾರಿಗೊಳಿಸಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಭೆಗಳಲ್ಲಿ ಪ್ರಮುಖ ಅಧಿಕಾರಿಗಳೊಂದಿಗೆ ಅರೆ ರಚನಾತ್ಮಕ ಪ್ರಶ್ನಾವಳಿಗಳೊಂದಿಗೆ ಹಾಗೂ ಸಂದರ್ಶನವು ಸೇರಿದಂತೆ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗು ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು ಸೇರಿಸಿ ಕ್ಷೇತ್ರ ಅಧ್ಯಾಯನವುನ್ನು ನಡೆಸಲಾಯಿತು. ಅಧ್ಯಾಯನ ತಂಡವು ಗುಣಾತ್ಮಕ ಪ್ರತಿಕ್ರಿಯೆ ಪಡೆಯಲು 12 ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಪರಿಶಿಷ್ಠ ಪಂಗಡ ಸಮುದಾಯದೊಂದಿಗೆ ಒಂದು ಕೇಂದ್ರಿಕೃತ ಗುಂಪು ಚರ್ಚೆಗಳನ್ನು ಅಯೋಜಿಸಲಾಗಿತ್ತು. ಬುಡಕಟ್ಟು ಮತ್ತು ಸೌಲಭ್ಯವಂಚಿತ ಗುಂಪುಗಳನ್ನು ಒಳಗೊಂಡ ಯೋಜನೆಯು ಸಾಮಾಜಿಕ ಮೌಲ್ಯಮಾಪನ ಆಧರಿಸಿ ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ತಯಾರಿಸಲಾಗುತ್ತದೆ.

ಪ್ರಮುಖ ಮಧ್ಯಸ್ಥಗಾರರ ವೀಕ್ಷಣೆಗಳನ್ನು ಪಡೆಯಲು ದಿನಾಂಕ 11-12-2015 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಭಾಂಗಣ, ಬೆಂಗಳೂರಿನಲ್ಲಿ ಆಯೋಜಿಸಲಾಯಿತು ಹಾಗು ಪ್ರಮುಖ ಹೂಡಿಕೆದಾರರ ಸಮಾಲೋಚನೆಗಳ ಮೂಲಕ ಸಲಹೆ ಮತ್ತು ಸೂಚನೆಗಳನ್ನು ಪಡೆಯಲಾಯಿತು.



**ಆದಿವಾಸಿ ಮತ್ತು ವಂಚಿತ ಪರಿಸ್ಥಿತಿಯಲ್ಲಿರುವ ಗುಂಪುಗಳನ್ನು ಸೇರ್ಪಡಿಸಲು ಕಾರ್ಯತಂತ್ರ**

ಅಧ್ಯಾಯನದ ಸಮಯದಲ್ಲಿ ಗಮನಿಸಿದಂತೆ ಕಾರ್ಯತಂತ್ರ, ಸಲಹೆ ಮತ್ತು ಪ್ರಮುಖ ಸಮಸ್ಯೆಗಳನ್ನು ಕೆಳಗಿನ ಕೋಷ್ಟಕದಲ್ಲಿ ಸಂಗ್ರಹಿಸಲಾಗಿದೆ.

**ಉದ್ದೇಶಿತ ಯೋಜನೆ ಘಟಕಗಳಡಿಯಲ್ಲಿ ಪ್ರಮುಖ ಕ್ಷೇತ್ರಗಳಲ್ಲಿ, ಸಮಸ್ಯೆಗಳಿಗೆ ಸಲಹೆಗಳು ಮತ್ತು ಕಾರ್ಯತಂತ್ರಗಳು**

| ಕ್ಷೇತ್ರ | **ಸೂಚಿಸಿದ ಕಾರ್ಯತಂತ್ರ** | **ಉದ್ದೇಶಿತ ಯೋಜನೆಯ ಘಟಕ** |
|---|---|---|
| ಜಾಗೃತಿ | • ಉತ್ತಮ ಪ್ರಭಾವ ಮತ್ತು ಪರಿಷ್ಕರಿಸಿದ ಪರಿಣಾಮದೊಂದಿಗೆ ಹೆಚ್ಚಿನ ಸಂವಹನ ಯೋಜನೆ<br>• ವಿವಿಧ ಯೋಜನೆ, ಮೇಲ್ವಿಚಾರಣೆ, ಆಯವ್ಯಯ ನಿಬಂಧನೆಗಳಲ್ಲಿ ಕಾರ್ಯವಿಧಾನಗಳನ್ನು ಮೂಡಿಸಲು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ವ್ಯವಸ್ಥೆ ಪರಿಚಯಿಸುವುದು. | ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ) |
| ಭಾಗವಹಿಸುವಿಕೆ | • ಅಭಿವೃದ್ಧಿ ಮುನ್ನೋಟ ತಯಾರಿಕೆಗೆ ಸುಧಾರಿತ ಮಾರ್ಗಸೂಚಿಗಳ ಬೇಡಿಕೆ ಮತ್ತು ಪೂರೈಕೆಯನ್ನು ಹೊಂದಿಸಲು ಯೋಜನೆ ರೂಪಿಸುವುದು.<br>• ವಾರ್ಷಿಕ ಯೋಜನೆಗಳಲ್ಲಿ ದೀರ್ಘಕಾಲದ ಫಲಾನುಭವಿಗಳ ಆಯ್ಕೆ ಮತ್ತು ಪಾರದರ್ಶಕ ಕಾರ್ಯವಿಧಾನದವನ್ನು ಪರಿಚಯಿಸುವುದು. | ಘಟಕ ಎ: ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ<br>ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ) |
| ಸಂಪನ್ಮೂಲಗಳ ನಿರ್ವಹಣೆ | • ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಮಹಿಳೆ ಮತ್ತು ಐತಿಹಾಸಿಕ ಅನಾನುಕೂಲ ಗುಂಪುಗಳಲ್ಲಿ ಗುರುತಿಸುವಿಕೆಯನ್ನು ಸಕ್ರಿಯಗೊಳಿಸಲು ಪರಿಷ್ಕತ ಆಯವ್ಯಯ ಹೂಡಿಕೆಯಲ್ಲಿನ ಮಾರ್ಗಸೂಚಿಗಳನ್ನು ಅಭಿವೃದ್ಧಿ ಮುನ್ನೋಟ ತಯಾರಿಕೆಯಲ್ಲಿ | ಘಟಕ ಎ: ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ<br>ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ |

| | | |
|---|---|---|
| | ಪ್ರತಿಬಿಂಬಿಸಲು ಯೋಜಿಸಿದೆ.<br>• ಮಾಹಿತಿಗಳಲ್ಲಿ ಸಾಕ್ಷಿ ಆಧಾರಿತ ನಿರ್ಧಾರ ಕೈಗೊಳ್ಳುವಿಕೆ. | ಸಾಮರ್ಥ್ಯಾಭಿವೃದ್ಧಿ) |
| ಹೊಣೆಗಾರಿಕೆ ಮತ್ತು ಪಾರದರ್ಶಕತೆ | • ಅಭಿವೃದ್ಧಿ ಮುನ್ನೋಟ, ವಾರ್ಷಿಕ ಕ್ರಿಯಾ ಯೋಜನೆ, ಲೆಕ್ಕ ಪರಿಶೋದನೆ ಇತ್ಯಾದಿ ವರದಿಗಳನ್ನು ಶಾಶ್ವತ ಸೂಚನಾ ಫಲಕಗಳ ಮೂಲಕ ಸಮುದಾಯದಲ್ಲಿ ಬಹಿರಂಗಪಡಿಸುವುದು ಅತ್ಯಗತ್ಯವಾಗಿರುತ್ತದೆ ಹಾಗು ಇದನ್ನು ಗ್ರಾಮ ಸಭೆಗೆ ವಿವರಿಸುವುದು.<br>• ಸಾಮಾಜಿಕ ನ್ಯಾಯ ಸಮಿತಿಯನ್ನು ಪುನರುಜ್ಜೀವನಗೊಳಿಸಿ ವಿಶೇಷ ಸಭೆಗಳ ಮೂಲಕ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಮಹಿಳೆಯರ ಅಂಶಗಳನ್ನು ವಿವರಿಸಲು ಸಭೆಗಳನ್ನು ಕರೆಯುವುದು.<br>• ಪರಿಶಿಷ್ಠ ಜಾತಿ, ಬುಡಕಟ್ಟು ಪಂಗಡ, ಮಹಿಳೆ ಮತ್ತು ಅಲ್ಪಸಂಖ್ಯಾತ ಗುಂಪುಗಳು ಸೇರಿದಂತೆ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳು, ಲೈನ್ ಇಲಾಖೆಗಳು ಮತ್ತು ಇತರೆ ಸಮಿತಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಸಷ್ಪನೆ ಪಡಿಸುವುದು. | ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ)<br>ಘಟಕ ಸಿ: ಯೋಜನಾ ನಿರ್ವಹಣಾ ಬೆಂಬಲ (ರಾಜ್ಯ ಮಟ್ಟದಲ್ಲಿ ಸಾಮರ್ಥ್ಯಾಭಿವೃದ್ಧಿ) |
| ಎಲ್ಲರನ್ನೂ ಒಳಗೊಳ್ಳುವ ಯೋಜನೆ | • ವಾರ್ಡ್ ಮತ್ತು ವಿಶೇಷ ಸಭೆಗಳಲ್ಲಿ ಧ್ವನಿ ಎತ್ತಿದ ಬೇಡಿಕೆಗಳನ್ನು ಒಟ್ಟುಗೂಡಿಸಿದವನ್ನು ಖಚಿತ ಪಡಿಸಿಕೊಳ್ಳುವ ಮೆಕ್ಯಾನಿಸಂ ಹೊಂದುವುದು.<br>• ಸಮುದಾಯದ ಸದಸ್ಯರು ನವೀಕರಣಗೊಂಡ ವಾರ್ಷಿಕ ಮತ್ತು ಅಭಿವೃದ್ಧಿ ಮುನ್ನೋಟ ಯೋಜನೆಗಳ ಪ್ರಗತಿ ಮತ್ತು ಮೇಲ್ವಿಚಾರಣೆಯ | ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ)<br>ಘಟಕ ಸಿ: ಯೋಜನಾ ನಿರ್ವಹಣಾ ಬೆಂಬಲ (ರಾಜ್ಯ ಮಟ್ಟದಲ್ಲಿ ಸಾಮರ್ಥ್ಯಾಭಿವೃದ್ಧಿ) |

| | | |
|---|---|---|
| | ಪಾತ್ರಗಳನ್ನು ಹೊಂದುವುದು.<br>• ವರದಿಗಳು ಮತ್ತು ಕುಂದುಕೊರತೆಗಳ ಸಮುದಾಯ ಪ್ರತಿಕ್ರಿಯೆಯ ರೆಕಾರ್ಡಿಂಗ್ ಸ್ಥಾಪಿಸಿವುದು.<br>• ಪ್ರತಿಕೂಲ ಗುಂಪುಗಳ ನಿರ್ದಿಷ್ಠ ಅಗತ್ಯಗಳಿಗೆ ತರಬೇತಿ ಮಾಡ್ಯೂಲ್ ಪುನರುಜ್ಜೀವನಗೊಳಿಸುವುದು. | |

**ಸಾಂಸ್ಥಿಕ ಮತ್ತು ಅನುಷ್ಠಾನ ವ್ಯವಸ್ಥೆಗಳು**

ಪ್ರಾಥಮಿಕವಾಗಿ ಒಟ್ಟಾರೆ ಕಾರ್ಯಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜವಾಬ್ದಾರಿಯಾಗಿದೆ ಹಾಗು ಇತರೆ ರಾಜ್ಯದ ಸಾಂಸ್ಥಿಕ ಸಂಸ್ಥೆಗಳ ಸಂಯೋಗದೊಂದಿಗೆ ಬಂಡವಾಳ ಹೂಡಿಕೆ ಅನುಷ್ಠಾನ ಜವಾಬ್ದಾರಿಗಳನ್ನು ಪಂಚಾಯತ್ ರಾಜ್‌ನ ಎರಡನೇ ಹಂತ ಮತ್ತು ವಿಶೇಷವಾಗಿ ಮೂರನೇ ಹಂತದ ಗ್ರಾಮ ಪಂಚಾಯತ್ ಜೋತೆಯಲ್ಲಿ ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ಮುಖ್ಯ ಕೆಲಸ ಅಭಿವೃದ್ಧಿ/ಸಾಧನೆ ಸೂಚಕಗಳ ಆಧಾರದ ಮೇಲೆ ಪಂಚಾಯತ್‌ನ ನೀತಿ ವಿಶ್ಲೇಷಣೆ, ಸೂತ್ರದ ಮೂಲಕ ನಿಧಿ ವರ್ಗಾವಣೆ ಮತ್ತು ಸೂಕ್ತ ನಿರ್ವಹಣೆಯು ಒಳಗೊಂಡಿರುತ್ತದೆ. ಒಂದು ಯೋಜನೆಯ ಮೇಲ್ವಿಚಾರಣಾ ಘಟಕವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಸ್ಥಾಪಿಸಲಾಗಿದೆ. ಅದು ಅಯಾದಿನದ ಯೋಜನೆಯ ನಿರ್ವಹಣೆ ಮತ್ತು ಒಟ್ಟಾರೆ ಯೋಜನೆಯ ಕಾರ್ಯರೂಪಕ್ಕೆ ತರುವ ಜವಾಬ್ದಾರಿಯೊಂದಿಗೆ ಇದು ಬ್ಯಾಂಕ್ ಮತ್ತು ಕರ್ನಾಟಕ ಪಾರದರ್ಶಕ ಸಂಗ್ರಹಣಾ ಯೋಜನೆಯ ಕಾಯ್ದೆ ಪ್ರಕಾರಗೊಳಿಸುವ ವ್ಯವಸ್ಥೆಗಳು, ಅಂತರ ಇಲಾಖೆಗಳ ಸಮನ್ವಯ, ಹಣಕಾಸು ನಿರ್ವಹಣೆ, ಪರಿಸರ ಮಾರ್ಗಸೂಚಿಗಳ ಅನುಷ್ಠಾನ, ಬುಡಕಟ್ಟು ಮತ್ತು ಸೌಲಭ್ಯವಂಚಿತ ಗುಂಪುಗಳನ್ನು ಒಳಗೊಡಿಸುವಿಕೆಯ ಯೋಜನೆಯ ಮೇಲ್ವಿಚಾರಣೆ ಮತ್ತು ಅನುಕರಣೆ ಖಚಿತಪಡಿಸಿಕೊಳ್ಳುವುದನ್ನು ಹೊಂದಿದೆ.

**ರಾಜ್ಯ ಮಟ್ಟದಲ್ಲಿ**

- ಯೋಜನಾ ಮೇಲ್ವಿಚಾರಣಾ ಘಟಕವು ಯೋಜನೆಯ ವಿತರಣಾ ಸೇರ್ಪಡೆಗಾಗಿ ಖಚಿತಪಡಿಸಿಕೊಳ್ಳಲು ಯೋಜನೆ, ತರಬೇತಿ, ಮತ್ತು ಸಂವಹನದಲ್ಲಿ ಸಕ್ರಿಯವಾಗಿ ಭಾಗಿವಹಿಸಿಲು

ಸಾಮಾಜಿಕ ತಜ್ಞರನ್ನು ಹೊಂದವುದು ಹಾಗು ಇದಲ್ಲದೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ತಂಡ ರಚಿಸುವುದು.

- ಅಬ್ದುಲ್ ನಜೀರ್ ಸಾಭ್ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಂಸ್ಥೆ ಮತ್ತು ಇತರೆ ತರಬೇತಿ ಸಂಸ್ಥೆ – ಸಂಪನ್ಮೂಲಗಳು, ತರಬೇತಿ ಮಾಡ್ಯುಲ್ ಮತ್ತು ಸಂವಹನ ಘಟಕಗಳನ್ನು ಪರಿಶಿಷ್ಠ ಪಂಗಡ ಮತ್ತು ಅನಾನುಕೂಲ ಗುಂಪುಗಳಿಗೆ ನೀಡುವುದು.

- ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ಪರಿಶಿಷ್ಠ ಸಂಶೋಧನಾ ಸಂಸ್ಥೆ ಹಾಗು ಇತರ ಸಂಶೋಧನಾ ಸಂಸ್ಥೆಗಳ ಜೊತೆಗೆ ಆಯ್ದ ಸೂಚಕಗಳ ಜೊತೆಗೆ ಹಾಗೂ ಸೇರ್ಪಡೆ ಮೇಲೆ ನಿಗಾ ಪ್ರಗತಿ ನಡೆಸಲು ಒಕ್ಕೂಟ ರೂಪಿಸುವುದು.

- ಇನ್ನಿತರ ನಿರ್ಮಾಣದ ಸಾಮರ್ಥ್ಯ ಮತ್ತು ಸಂಶೋಧನಾ ಸಂಸ್ಥೆಗಳು ಪಾಲುದಾರನಾಗಿ ಪ್ರಗತಿ ಮೌಲ್ಯಮಾಪನ ಅಧ್ಯಾಯನಗಳನ್ನು ನಡೆಸುವುದು.

**ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಲೈನ್ ಇಲಾಖೆಗಳ ಮಟ್ಟದಲ್ಲಿ**

- ಕಾರ್ಯಗಳು, ಪ್ರಕ್ರಿಯೆಗಳು, ಪಾತ್ರ ಮತ್ತು ಸಂವಹನ ಮೂಲಕ ಬುಡಕಟ್ಟು ಜನರ ಕಲ್ಯಾಣ ಅಧಿಕಾರಿಗಳು ಸೇರಿದಂತೆ ಕಾರ್ಯಕರ್ತರು ಮತ್ತು ಲೈನ್ ಇಲಾಖೆಗಳು ಜವಾಬ್ದಾರಿಗಳನ್ನು ಸ್ಪಷ್ಟೀಕರಣದ ಸಂವಹನದೊಂದಿಗೆ ವಿಶೇಷವಾಗಿ ಪರಿಶಿಷ್ಠ ಅನನ್ಯ ಅಗತ್ಯಗಳಿಗೆ ತಕ್ಕಂತೆ ವಿನ್ಯಾಸದ ಮಾಡ್ಯೂಲ್ ರೂಪಿಸುವುದು.

- ಸಾಮಾಜಿಕ ನ್ಯಾಯ ಸಮಿತಿಗಳು ಮತ್ತು ಅರಣ್ಯ ನಿರ್ವಹಣಾ ಸಮಿತಿಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಸಾಮರ್ಥ್ಯಾಭಿವೃದ್ಧಿ ಮಾಡುವುದು.

- ಹೆಚ್ಚುವರಿಯಾಗಿ ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು ಹಾಗು ವೃತ್ತಿಪರರು ತಂಡವಾಗಿ ಬೆಂಬಲಗಳಿಸುವುದು.

## ದೂರು ನಿವಾರಣೆ ಮತ್ತು ಪ್ರತಿಕ್ರಿಯೆಯ ಯಾಂತ್ರಿಕ ವಿನ್ಯಾಸ

ಒಂದು ದೃಡವಾದ ದೂರು ನಿವಾರಣಾ ಮತ್ತು ಸಮುದಾಯ ಪ್ರತಿಕ್ರಿಯೆ ವ್ಯವಸ್ಥೆಯು ಅಭಿವೃದ್ಧಿ ಯೋಜನೆಗೆ ಮತ್ತು ಸಾರ್ವಜನಿಕ ಯೋಜನೆಗೆ ಮುಖ್ಯವಾದದು. ಈ ಯಾಂತ್ರಿಕ ವಿನ್ಯಾಸವು ಕೇಳಿದ ಪ್ರತಿ ಸಮುದಾಯ ಸದಸ್ಯರ ಧ್ವನಿಯನ್ನು ಖಚಿತಪಡಿಸುತ್ತದೆ ಆದರೆ ಒಂದು ಕೇವಲ ಪಾರದರ್ಶಕ ವ್ಯವಸ್ಥೆಯಾಗಿ ಸಹಾಯ ಮಾಡುತ್ತದೆ. ಈ ಯಾವುದೇ ಭ್ರಷ್ಟಾಚಾರ/ಕಸಿಯ ಒಂದು ನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಅದೇ ಸಮಯದಲ್ಲಿ ಸಾರ್ವಜನಿಕ ದೂರುಗಳನ್ನು ತ್ವರಿತವಾಗಿ ವಿಲೇವಾರಿಯಿಂದ ಅವರ ವಿಶ್ವಾಸದ ಹೆಚ್ಚಳವನ್ನು ಖಚಿತಪಡಿಸಿಕೊಳ್ಳುತ್ತದೆ. ಆದ್ದರಿಂದ ಈ ವ್ಯವಸ್ಥೆಯು ಸಮುದಾಯದಿಂದ ಪ್ರತಿಕ್ರಿಯೆಯನ್ನು ತೆಗೆದುಕೊಳ್ಳುವ ಪ್ರಕಾರದಲ್ಲಿ ತನ್ನ ಬಳಕೆದಾರರ ಅಗತ್ಯಗಳನ್ನು ಸುಧಾರಿಸಲು ಅನೇಕ ಕಾರ್ಯಕ್ರಮಗಳ ಅಲೋಚನೆಗಳನ್ನು ರಚಿಸುತ್ತದೆ. ಒಟ್ಟಾರೆ ಉದ್ದೇಶಿತ ಯೋಜನೆಯು ಧ್ವನಿಮುದ್ರಣ ಚಟುವಟಿಕೆಗಳಿಂದ ಕುಂದುಕೊರತೆಗಳ ಬಗ್ಗೆ ಹೆಚ್ಚು ಪ್ರತಿಕ್ರಿಯೆ ವರದಿಗಳನ್ನು ಸ್ಥಾಪಿಸಿ ಮಾಡಬೇಕು.

ಉದ್ದೇಶಿತ ಯೋಜನೆಯು ಕೇವಲ ಯಾಂತ್ರಿಕವಾಗಿ ಸಾಧನೆ ಮಾಡುವುದಲ್ಲದೆ ಸಾರ್ವಜನಿಕ ದೂರು ವ್ಯವಸ್ಥೆಗೆ ರಾಜ್ಯ ಮಟ್ಟದ ವ್ಯವಸ್ಥಾಪಕರ ಕಾಳಚಿ ಮತ್ತು ಸಲಹೆಗಳನ್ನು ಸಲ್ಲಿಸಲು ವ್ಯವಸ್ಥೆಯ ಬಾಗವಾಗಿ ಮಾಡಬಹುದು ಎಂದು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಸಮುದಾಯದ ಸದಸ್ಯರು ಸರ್ಕಾರದ ಉನ್ನತ ಮಟ್ಟದ ಸ್ಥಳೀಯ ಪ್ರಾಧಿಕಾರಗಳ ಕಡೆಯಿಂದ ಅನುಸರಣೆ ವೈಪಲ್ಯಗಳ ವರದಿಯನ್ನು ಗ್ರಾಮ ಪಂಚಾಯತ್ ಸ್ವಂತಹ ಹೊರಗೆ ಈ ವ್ಯವಸ್ಥೆಯ ಮಾರ್ಗವನ್ನು ಒದಗಿಸುತ್ತದೆ. ಈದು ಸ್ಥಳೀಯ ಸರ್ಕಾರದ ನಾಯಕರು ಮತ್ತು ಸಿಬ್ಬಂದಿ ಮೇಲೆ ಹೆಚ್ಚುವರಿ ಹೊಣೆಗಾರಿಕೆಗೆ ಸಹಾಯ ಮಾಡುವುದು ಆಶಯವಾಗಿದೆ.

ದೂರು ಸಾಮನ್ಯ ಪ್ರತಿಕ್ರಿಯೆ ಮತ್ತು ಚಟುವಟಿಕೆಗಳ ಕುಂದುಕೊರತೆಗಳ ರೆಕಾರ್ಡಿಂಗ್ ಮತ್ತು ವರದಿ ತಯಾರಿಸಲು ಯೋಜನಾ ವ್ಯವಸ್ಥೆಯನ್ನು ಸ್ಥಾಪಿಸವುದು. ದೂರು ರೆಕಾರ್ಡಿಂಗ್ ಮತ್ತು ನಿವಾರಣಾ ವ್ಯವಸ್ಥೆಯನ್ನು ನಾಗರಿಕರ ಪ್ರತಿಕ್ರಿಯೆ ಸಲ್ಲಿಸಲು ಜಾಲ ಆಧಾರಿತ ಮಿಶ್ರ ಮಾಧ್ಯಮಗಳನ್ನು ಒಳಗೊಂಡ ಬರೆದ ದೂರವಾಣಿ, ಕಿರು ಸಂದೇಶಗಳನ್ನು ವ್ಯವಸ್ಥೆಗೊಳಿಸುವುದು. ದಿನದ 24 ಗಂಟೆಗಳ ಸ್ವಯಂಚಾಲಿತ ಸಲಕರಣೆಗಳ ಮೂಲಕ ದೂರು ಸಲ್ಲಿಕೆ ದಾಖಲೆಗಳು ಲಭ್ಯವಿರುವಂತೆ ಮಾಡುವುದು. ಯೋಜನಾ ಮೇಲ್ವಿಚಾರಣಾ ಘಟಕವು ಕಾಲಾನುಕ್ರಮಣಿಕೆ ತನಿಖೆ ವರದಿ ಮತ್ತು ಕುಂದುಕೊರತೆಗಳ ಪರಿಹಾರಕ್ಕೆ ಆದರೆ

ಸೀಮಿತವಾಗಿಲ್ಲದ ಸಾಮಾನ್ಯ ಸಮಸ್ಯೆಗಳು ಮತ್ತು ಕಾಳಜಿಗಳಲ್ಲಿ ತಪ್ಪೆಸಗದ ರೀತಿಯ ಬಗ್ಗೆ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಮಾರ್ಗಸೂಚಿಗಳನ್ನು ಅಭಿವೃದ್ಧಿ ಪಡಿಸುವುದು.

**ಕ್ರಿಯಾ ಯೋಜನೆ**

ಒಟ್ಟು ಯೋಜನೆಯ ಭಾಗವಾಗಿ ಬುಡಕಟ್ಟು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳಲ್ಲಿ ಸೇರ್ಪಡೆ ಮತ್ತಷ್ಟು ಹೆಚ್ಚಿಸಲು ಪ್ರಮುಖ ಚಟುವಟಿಕೆಗಳಿಗೆ ಪ್ರಸ್ತಾಪಿತ ಕ್ರಿಯಾ ಯೋಜನೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಯೋಜನೆಯ ಘಟಕಗಳು, ಕಾರ್ಯಗಳು, ವಿವರಗಳು, ಜವಾಬ್ದಾರಿಗಳು ಮತ್ತು ಕಾಲಾನುಕ್ರಮ**

| ಕ್ರ..ಸಂ. | ಯೋಜನೆಯ ಘಟಕಗಳು | ಕಾರ್ಯ ನಿರ್ವಹಿಸಿವುದು (ಬುಡಕಟ್ಟು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳ ಸೇರ್ಪಡೆ ಈಡೇರಿಸಿಕೊಳ್ಳುವುದು) | ವಿವರಗಳು | ಜವಾಬ್ದಾರಿ | ಕಾಲಾನುಕ್ರಮ |
|---|---|---|---|---|---|
| 1 | ಘಟಕ ಎ: ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ | ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಠ ಜಾತಿ ಮತ್ತು ಪಂಗಡದ ವಾಸ ಸ್ಥಳದಲ್ಲಿ ನಿರ್ದಿಷ್ಟವಾಗಿ ಮುಕ್ತ ಅನುದಾನದ ವೆಚ್ಚ. | • ಅಭಿವೃದ್ಧಿ ಮುನ್ನೋಟ ಮತ್ತು ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಬುಡಕಟ್ಟು ಮತ್ತು ಸೇರ್ಪಡೆ ಯೋಜನೆಗಾಗಿ ಪ್ರತ್ಯೇಕ ವಿಭಾಗ ಹೊಂದುವುದು.<br>• ಮಹಿಳೆಯರು, ಪರಿಶಿಷ್ಠ ಜಾತಿ ಮತ್ತು ಪಂಗಡ ಹಾಗು ಐತಿಹಾಸಿಕವಾಗಿ ಬಹಿಷ್ಕರಿಸಲ್ಪಟ್ಟ ಗುಂಪುಗಳ ಸಲಹೆ ಮತ್ತು ಅಭಿಪ್ರಾಯಗಳನ್ನು ಯೋಜನಾ ವ್ಯಾಖ್ಯಾನಕ್ಕೆ ಮೇಲಿನಿಂದ ತೆಗೆದುಕೊಳ್ಳಲಾಗುವುದನ್ನು ಖಚಿತಪಡಿಸಿಕೊಳ್ಳವುದು.<br>• ಸೇರ್ಪಡೆ ಅಭಿವೃದ್ಧಿ ಭಾಗದ ಅಂಗವಾಗಿ ಅಭಿವೃದ್ಧಿ ಮುನ್ನೋಟ ಉಪಕರಣಗಳ ಕಿಟ್ | ಯೋಮೇಘ/ ಅನಸಾಗ್ರಾಅ ಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 2 | ಘಟಕ ಬಿ: ಸಾಂಸ್ಥಿಕ ಅಭಿವೃದ್ಧಿ (ಗ್ರಾಮ ಪಂಚಾಯಿತಿಗಳ ಸಾಮರ್ಥ್ಯಾಭಿವೃದ್ಧಿ) | • ನೇಮಕಾತಿಗೊಂಡ ಗ್ರಾಮೀಣ ಅಭಿವೃದ್ಧಿ ಅಧಿಕಾರಿಗಳಿಗೆ ಕ್ಲಸ್ಟರ್ ವಿಧಾನದಿಂದ ಸಾಮರ್ಥ್ಯ ನಿರ್ಮಿಸಲು ಮತ್ತು ಗ್ರಾಮ ಪಂಚಾಯಿತಿಗಳ | • ಎಲ್ಲಾ ಗ್ರಾಮೀಣ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ<br>• ಸಮುದಾಯ ಆಧಾರಿತ ಯೋಜನೆ ಮತ್ತು ಮಾಡ್ಯೂಲ್‌ನ ಅಭಿವೃದ್ಧಿ. | ಯೋಮೇಘ/ ಅನಸಾಗ್ರಾ ಅಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |

| | | | | | |
|---|---|---|---|---|---|
| | | ಮೇಲ್ವಿಚಾರಣೆಯಲ್ಲಿ ಸುಧಾರಿಸಲು ಬೆಂಬಲಿಸುವುದು.<br>• ಬುಡಕಟ್ಟು ಜನರ ಸೇವೆ ಸಲ್ಲಿಸಲು ಗ್ರಾಮೀಣ ಅಭಿವೃದ್ಧಿ ಅಧಿಕಾರಿಗಳಿಗೆ ವಿಶೇಷ ತರಬೇತಿ | | | |
| 3 | | ನಿರ್ಮಾಣವಾಗುತ್ತಿರುವ ಸಾಮರ್ಥ್ಯಾಭಿವೃದ್ಧಿಗೆ ಸಾಮಾಜಿಕ ಸೇಪರ್ಡೆಯ ಮಾದರಿ | • ಸಮಗ್ರ ಅಭಿವೃದ್ಧಿ ಯೋಜನಾ ಮಾದರಿ.<br>• ಯೋಜನಾ ಪ್ರದೇಶದಲ್ಲಿ ಅರಣ್ಯ ಸಮಿತಿ ಅಡಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಪಟ್ಟಿ ಮತ್ತು ನಕಾಶೆ ಮಾಡುವುದು ಹಾಗು ನಿರ್ಧಿಷ್ಠ ತರಬೇತಿ ಮಾದರಿಗಳನ್ನು ಅಭಿವೃದ್ಧಿ ಪಡಿಸುವುದು. | ಯೋಮೇಘ/ ಅನಸಾಗ್ರಾ ಅಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 4 | | ಗ್ರಾಮ ಅರಣ್ಯ ನಿರ್ವಹಣಾ ಸಮಿತಿಯ ಸದಸ್ಯರಿಗೆ ತರಬೇತಿ ನೀಡುವುದು | • ಯೋಜನೆಯ ಆರಂಭದಲ್ಲಿ ಎಲ್ಲಾ ಸದಸ್ಯರಿಗೆ ತರಬೇತಿಯನ್ನು ನೀಡುವುದು.<br>• ಪ್ರತಿ ತರಬೇತಿ ಕೊನೆಯಲ್ಲಿ ಕ್ರಿಯಾ ಯೋಜನೆ ಅಭಿವೃದ್ಧಿಪಡಿಸುವುದು.<br>• ತರಬೇತಿ ಮುನ್ನಡೆ ಮತ್ತು ಚೈತನ್ಯವನ್ನು ಸಂಯೋಜಿಸುವುದು.<br>• ವಿನಿಮಯ ಕಲಿಕೆಯ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು. | ಯೋಮೇಘ/ ಅನಸಾಗ್ರಾ ಅಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 5 | | ಪರಿಶಿಷ್ಠ ಪಂಗಡದ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡುವುದು | • ಪರಿಶಿಷ್ಠ ಪಂಗಡದ ಚುನಾಯಿತ ಪ್ರತಿನಿಧಿಗಳಿಗೆ ಅನಸರಣೆಯ ಅವಲೋಕನದ ತರಬೇತಿಗಳನ್ನು ಅಯೋಜಿಸುವುದು | ಅನಸಾಗ್ರಾಅ ಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 6 | | ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಸಾಮಾಜಿಕ ಸೇಪರ್ಡೆಗೊಳ್ಳುವಿಕೆಯ ಬಗ್ಗೆ ತರಬೇತಿ ನೀಡುವುದು | • ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಸಾಮಾಜಿಕ ಸೇಪರ್ಡೆ ಮೂಲ ತತ್ವಗಳ ದಿಕ್ಕಿನಲ್ಲಿನ ವಿನ್ಯಾಸದ ಮೇಲೆ<br>• ಸಮಸ್ಯೆಗಳನ್ನು ಪರಿಹರಿಸಲು ಗ್ರಾಮ ಪಂಚಾಯಿತಿಗಳು ಸಾಮಾಜಿಕ ಸೇಪರ್ಡೆ ಯೋಜನೆಗಳನ್ನು ತಯಾರಿಸುವುದು | ಅನಸಾಗ್ರಾಅ ಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 7 | | ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳು | • ಬುಡಕಟ್ಟು ಮತ್ತು ಆದಿವಾಸಿ ಸಮುದಾಯದ ಸದಸ್ಯರುಗಳಲ್ಲಿ ಜಾಗೃತಿ ಸೃಷ್ಟಿಸಲು ವಿಶೇಷವಾಗಿ ಸಂಪರ್ಕದಲ್ಲಿರುವ ಅಭಿವೃದ್ಧಿ ಸಂಸ್ಥೆ/ಇಲಾಖೆಗಳನ್ನು ಗುರುತಿಸುವುದು.<br>• ಸ್ಥಳೀಯ ಭಾಷೆ ಸಂದೇಶಗಳನ್ನು | ಯೋಮೇಘ/ ಅನಸಾಗ್ರಾ ಅಪಂರಾಸಂ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |

| | | | | | |
|---|---|---|---|---|---|
| | | | ಅಭಿವೃದ್ಧಿ ಪಡಿಸುವುದು.<br>• ಸರ್ಕಾರಿ ಯೋಜನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಭೌಗೋಳಿಕವಾಗಿ ಹೊರತುಪಡಿಸಿದ ಪ್ರದೇಶಗಳಲ್ಲಿನ ಹಕ್ಕುಗಳಿಗಾಗಿ ತೀವ್ರವಾದ IEC ಚಟುವಟಿಕೆಗಳನ್ನು ರೂಪಿಸುವುದು.<br>• ಸಾಮಾಜಿಕ ಸ್ಪೇಪರ್ಡೆ ಮತ್ತು ಸಂವಹನಗಳಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳ ಸಾಮರ್ಥ್ಯವರ್ಧನೆ ಮಾಡುವುದು | | |
| 8 | ಘಟಕ ಬಿ: ಸಮುದಾಯದ ಒಪ್ಪಂದಗಳು ಹಾಗು ಪ್ರತಿಕ್ರಿಯೆಗಳು | • ಪರಿಶಿಷ್ಠ ಹಾಗು ತಳಮಟ್ಟದ ಜನರ ಅಭಿವೃದ್ದಿಗೆ ಗುಣಮಟ್ಟ ಇಲ್ಲದೆ ಕಾರ್ಯನಿರ್ವಹಿಸುತೀರುವ ಗ್ರಾಮ ಪಂಚಾಯಿತಿಗಳಲ್ಲಿ ಅಯೋಜಕರು ಗ್ರಾಮ ಪಂಚಾಯಿತಿಗಳಲ್ಲಿನ<br>• ತಂಡದಲ್ಲಿ ತೊಡಗಿಸಿಕೊಳ್ಳಲು ಒಂದು ಸಮುದಾಯ ಪ್ರತಿಕ್ರಿಯೆ ವ್ಯವಸ್ಥೆಯನ್ನು ಸ್ಥಾಪಿಸುವುದು. | • ಯೋಜನೆಯ ಗ್ರಾಮ ಪಂಚಾಯಿತಿಗಳಲ್ಲಿ ಅನುಕೂಲ ಸಹಾಯಕರನ್ನು ಗುರುತಿಸುವುದು.<br>• ಸಮುದಾಯ ಆಧಾರಿತ ಉಸ್ತುವಾರಿಯ ಚೌಕಟ್ಟನ್ನು ಅಭಿವೃದ್ಧಿ ಪಡಿಸುವುದು.<br>• ಸಮುದಾಯ ಪ್ರತಿಕ್ರಿಯೆ ವ್ಯವಸ್ಥೆಯ ಮೇಲೆ ತರಬೇತಿಗಳು. | ಯೋಮೇಘ/ ಅನಸಾಗ್ರಾ ಅಪಂರಾಸಂ | |
| 9 | ಘಟಕ ಸಿ: ಪುರಾವೆ ಆಧಾರಿತ ನಿರ್ಧಾರ ಮಾಡುವ ಮಾಹಿತಿ ವ್ಯವಸ್ಥೆ | | • IEC ಚಟುವಟಿಕೆಗಳ ವ್ಯವಸ್ಥೆಯನ್ನು ಅಧ್ಯಾಯನ ಮಾಡುವುದು<br>• IEC ಚಟುವಟಿಕೆಗಳ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು | ಯೋಮೇಘ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| | | | | | |
| 10 | ಘಟಕ ಸಿ: ಯೋಜನಾ ಮೇಲ್ವಿಚಾರಣ ಘಟಕವನ್ನು ಬಲಪಡಿಸುವುದು | | • ಸಮುದಾಯ ಆಧಾರಿತ ಯೋಜನೆಯ ಅಭಿವೃದ್ಧಿ.<br>• ಗುರುತಿಸಲಾದ ಸಲಹೆಗಾರರ ನೇಮಕಾತಿ. | ಯೋಮೇಘ | ಯೋಜನೆಯ ಮೊದಲ ಐದು ವರ್ಷಗಳಲ್ಲಿ |
| 11 | ಘಟಕ ಸಿ: ಅ.ನ.ಸಾ.ಗ್ರಾ.ಅ. ಪಂ.ರಾಜ್ ಸಂಸ್ಥೆಯನ್ನು ಬಲಪಡಿಸುವುದು | • ಅ.ನ.ಸಾ.ಗ್ರಾ.ಅ. ಪಂ.ರಾಜ್ ಸಂಸ್ಥೆಗೆ<br>• ಮೀಸಲಾದ ಕೋಶವನ್ನು | • ಯೋಜನೆಯ ಚಟುವಟಿಕೆ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಸ್ಥಳೀಯ ಜನರ ಸ್ಪೇಪರ್ಡೆ ಮತ್ತು ಮೇಲ್ವಿಚಾರಣೆ ಖಚಿತಪಡಿಸಿಕೊಳ್ಳಲು | ಯೋಮೇಘ | |

| | | | | | |
|---|---|---|---|---|---|
| | | ಸೃಷ್ಟಿಸುವುದು. | ಕನಿಷ್ಠ ಇಬ್ಬರು ಸಿಬ್ಬಂದಿಗಳ ನೇಮಕಾತಿ. | | |
| 12 | ಘಟಕ ಸಿ: ವಿಕೇಂದ್ರೀಕರಣ ವಿಶ್ಲೇಷಣಾ ಕೋಶವನ್ನು ಬಲಪಡಿಸುವುದು | • ಅಂತರಿಕ ಹಾಗೂ ಬಾಹ್ಯ ಮೇಲ್ವಚಾರಣೆ | • ಅಡಿಪಾಯ, ಪ್ರಕ್ರಿಯೆ ದಾಖಲಾತಿ, ಮಧ್ಯಾಮಾವಧಿ ಮೌಲ್ಯಮಾಪನ, ನಿರ್ಧಿಷ್ಠ ಅಧ್ಯಾಯನಗಳು ಮತ್ತು ಪರಿಣಾಮ ನಿರ್ಧರಿಸುವ ಮೌಲ್ಯಮಾಪನ ಮಾಡುವುದು. | ಯೋಮೇಘ/ ಅನಸಾಗ್ರಾಅ ಪಂರಾಸಂ/ ತಜ್ಞರು | |